ಎದುರಿಗೆ ಬಂದ ಹುಡುಗಿಯ ನೆನಪಾಗಿ ಅವನು ಇನ್ನೊಂದು ಬನ್ನನ್ನು ಕೈಗೆತ್ತಿಕೊಂಡ. ಅದನ್ನು ತಿನ್ನಲು ತೊಡಗಿದಾಗ ಅದನ್ನು ಕಟ್ಟಿ ಕೊಟ್ಟಿದ್ದ ನ್ಯೂಸ್ ಪೇಪರಿನ ತುಂಡಿನ ಮೇಲೆ ಅವನ ಕಣ್ಣು ಬಿತ್ತು. ಅದರಲ್ಲಿಯ ಹಳೆಯ ಸುದ್ದಿಯ ತುಣುಕೊಂದು ಅವನ ಗಮನ ಸೆಳೆಯಿತು. ನಗರದಲ್ಲಿ ಕಸದ ಸಮಸ್ಯೆ ತಾರಕಕ್ಕೆ ಎಂಬ ತಲೆಬರಹದ ಕೆಳಗೆ ಇದ್ದ ಮಜಕೂರನ್ನು ಅವನು ಓದುತ್ತಾ ಕೂತ. ಕಾರ್ಪೋರೇಶನ್ನಿನವರು ಎಷ್ಟೇ ಪ್ರಯತ್ನಿಸಿದರೂ ಕಸದ ಸಮಸ್ಯೆಯನ್ನು ಬಗೆಹರಿಸಲು ಸಾಧ್ಯವಾಗುತ್ತಿಲ್ಲ ಎಂಬ ಆರೋಪದ ಧ್ವನಿ ಅಲ್ಲಿ ಸೂಚಿತವಾಗಿತ್ತು. 'ಸಾಕಷ್ಟು ಹಣ ಖರ್ಚು ಮಾಡುತ್ತಿದ್ದೇವೆ. ಆದರೆ ಸಾರ್ವಜನಿಕರು ಸಹಕಾರ ಕೊಡದಿದ್ದಲ್ಲಿ ಪರಿಸ್ಥಿತಿ ಹದಗೆಡಬಹುದು. ಪ್ಲೇಗ್ ಕೂಡಾ ಹರಡ ಬಹುದು' ಎಂಬ ಸೂಚನೆಯನ್ನು ಕೊಡಲಾಗಿತ್ತು. ಉಳಿದ ಸುದ್ದಿ ಆ ತುಣುಕಿನಲ್ಲಿ ಇರಲಿಲ್ಲ. ಅವನು ಅದನ್ನು ತೆಗೆದು ಬೆಂಚಿನ ಮೇಲಿಟ್ಟು ಅದರ ಮೇಲೆ ನೀರಿನ ಬಾಟಲಿಯನ್ನಿಟ್ಟು ಬನ್ ಅಗಿಯುತ್ತಾ ಕುಳಿತ.

ನಿಧಾನವಾಗಿ ಬಿಸಿಲೇರುತ್ತಿತ್ತು. ಗಾಳಿಯೂ ಜೋರಾಗಿತ್ತು. ಅವನು ಎಂಜಲೆಲೆ ಪೇಪರ್, ಕಪ್ಸ್ ಆ ಗಾಳಿಗೆ ಹಾರಿ ಹೋಗುತ್ತಿರುವುದನ್ನೇ ನೋಡುತ್ತಾ ಕುಳಿತ. ಪಾರ್ಕಿನ ಹೊರಗಿನ ರಸ್ತೆಯಲ್ಲಿ ವಾಹನಗಳು ಒಂದೇ ದಿಕ್ಕಿಗೆ ಓಡುತ್ತಿದ್ದುವು. ಅವನು ಗಮನಿಸಿದಂತೆ ಅಂಥ ಒತ್ತಡವೇನೂ ವಾಹನಗಳ ನಡುವೆ ಇರಲಿಲ್ಲ. ಸಾಮಾನ್ಯವಾಗಿ ಆ ಹೊತ್ತಿನಲ್ಲಿ ಆಫೀಸಿನತ್ತ ಓಡುವ ವಾಹನಗಳೆಷ್ಟಿರುತ್ತವೆಂದರೆ ರಸ್ತೆ ದಾಟುವುದು ಅಸಾಧ್ಯವಾಗುತ್ತಿತ್ತು. ಅಪಾಯಕಾರಿಯಾಗಿಯೂ ಇರುತ್ತಿದ್ದುವು. ಭಾನುವಾರದ ದಿನ ತುಸು ಕಮ್ಮಿ ಟ್ರಾಫಿಕ್. ಆದರೆ ಇಷ್ಟು ಕಮ್ಮಿ ವಾಹನಗಳು ಓಡಾಡುತ್ತಿರುವುದು ಅವನಿಗೆ ಆಶ್ಚರ್ಯ ತಂದಿತು.

ಬನ್ ತಿಂದಾದುದರಿಂದ ಅವನು ನೀರು ಕುಡಿಯಲು ಬಾಟಲನ್ನು ಕೈಗೆತ್ತಿಕೊಂಡ. ಎತ್ತಿಕೊಂಡದ್ದೇ ಅದರ ಕೆಳಗಿದ್ದ ಪೇಪರಿನ ತುಂಡು ಗಾಳಿಗೆ ಹಾರಿ ಹೋಯಿತು. ಎಷ್ಟು ದೂರ ಹೋಯಿತೆಂದರೆ ಅವನಿಗೆ ಎದ್ದು ಹೋಗಿ ಅದನ್ನು ತರುವುದಕ್ಕೆ ಮನಸ್ಸೇ ಆಗಲಿಲ್ಲ. ಅಲ್ಲಿಯೇ ಕಾರ್ಪೋರೇಶನ್ನಿನ ಕಸದ ತೊಟ್ಟಿಯೇನೋ ಇತ್ತು. ಅದರಲ್ಲಿ ಹಾಕುವುದು ಅಂಥ ಕಷ್ಟದ ಕೆಲಸವೇನೂ ಆಗಿರಲಿಲ್ಲ. ಆದರೆ ಎಂಜಲೆಲೆಗಳ ನಡುವೆ, ಪ್ಲಾಸ್ಟಿಕ್‌ಗಳ ನಡುವೆ ಇದೊಂದು ಹೆಚ್ಚಾಗಲಾರದು ಎಂದು ಅವನು ತನ್ನ ಆಲಸ್ಯವನ್ನು ಮನಸ್ಸಿನಲ್ಲಿಯೇ ಸಮರ್ಥಿಸಿಕೊಂಡ. ನೀರು ಕುಡಿದ ಮೇಲೆ ತುಸು ನಿರಾಳವೆನಿಸಿ, ಜೇಬಿನಲ್ಲಿದ್ದ ಸಿಗರೇಟನ್ನು ತೆಗೆದು ಹಚ್ಚಿಕೊಂಡ. ಅದರ ಹೊಗೆ ಪುಪ್ಪುಸದೊಳಗೆ ಹೋದಾಗ ಆಹ್ಲಾದವೆನಿಸಿತು. ಸೇದುತ್ತಾ ಕುಳಿತ.

ಪಾರ್ಕಿನ ಎರಡು ಬದಿಗಳಲ್ಲಿ ರಸ್ತೆಗಳಿದ್ದುವು. ಅದರಾಚೆ ಮನೆಗಳ ಸಾಲು. ಕೆಲವಕ್ಕೆ ಮಹಡಿಗಳಿದ್ದವು. ಹೊರಗಡೆಯಿಂದಲೇ ಮೆಟ್ಟಲುಗಳಿದ್ದುದರಿಂದ ಅದನ್ನು ಮಾಲೀಕರು ಬಾಡಿಗೆಗೆ ಕೊಟ್ಟಿದ್ದು ಸ್ಪಷ್ಟವಾಗಿತ್ತು. ದೂರದಲ್ಲೆಲ್ಲೋ ಒಂದು ಕಡೆ ಒಂದು ಅಪಾರ್ಟ್‌ಮೆಂಟಿನ ಕೆಲಸ ನಡೆಯುತ್ತಿತ್ತು. ಆದುದರಿಂದ ರಸ್ತೆಯ ಮೇಲೆ ಜಲ್ಲಿಕಲ್ಲುಗಳ, ಮರಳಿನ, ಇಟ್ಟಿಗೆಗಳ ರಾಶಿ ಬಿದ್ದಿದ್ದವು. ಅದರ ಎದುರು ರಸ್ತೆಯ ಈ ಬದಿಗೆ, ಅಂದರೆ ಪಾರ್ಕಿನ ಹೊರ ಅಂಚಿಗೆ ತಾಗಿಕೊಂಡು ಕಟ್ಟಡದ ಕೆಲಸಗಾರನೊಬ್ಬನ ಹಂಗಾಮಿ ಜೋಪಡಿಯೊಂದಿತ್ತು. ಆ ಕೆಲಸಗಾರನ ಸಂಸಾರ ಅಲ್ಲಿ ವಾಸವಿದ್ದು ಅವನ ಹೆಂಡತಿ ಮೂರು ಇಟ್ಟಿಗೆಗಳನ್ನಿಟ್ಟು ಒಲೆ ಹೂಡಿ, ಅಲ್ಯುಮಿನಿಯಂ ಪಾತ್ರೆಯಲ್ಲಿ ಅನ್ನ ಬೇಯಿಸುತ್ತಲೋ ಹಂಚಿನ ಮೇಲೆ ರೊಟ್ಟಿ ತಟ್ಟುತ್ತಲೋ ಇರುವುದನ್ನು ಅವನು ಕಂಡಿದ್ದ. ಕೆಲಸಗಾರನ ಚಿಕ್ಕಚಿಕ್ಕ ಮಕ್ಕಳು ಮೈಮೇಲೆ ಅಂಗಿಯಿಲ್ಲದೆ ಆ ಮರಳಿನಲ್ಲಿ ಆಟವಾಡುವುದನ್ನೂ ಅವನು ಕಂಡಿದ್ದ. ಒಮ್ಮೆ ತಲೆ ತಿರುಗಿಸಿ